ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 2500/2021

ಪಿರ್ಯಾದಿ ಃ ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

- ವಿರುದ್ಧ -

ಆರೋಪಿ/ತರುಃ

1) ಮಹೇಶ.ಹೆಚ್.ಎಸ್. ಬಿನ್ ಸತ್ಯನಾರಾಯಣಶೆಟ್ಟಿ, 40 ವರ್ಷ, ವಾಸ ಃ ಆಚಾರ್ ಬೀದಿ, ತರೀಕೆರೆ ಟೌನ್, ತರೀಕೆರೆ ತಾಲ್ಲೂಕು

2) ಶಿವು ಬಿನ್ ನಿಂಗಪ್ಪ, 36 ವರ್ಷ, ವಾಸ ಃ ಸುರಪಾನ ವೈನ್ಸ್ ಮಾಲೀಕರು, ತರೀಕೆರೆ ಟೌನ್, ತರೀಕೆರೆ ತಾಲ್ಲೂಕು

****

## -ಃ ದೋಷಾರೋಪಣೆ ಃ-

ಶ್ರೀಮತಿ ಊರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ಆರೋಪಿತರಾದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆಗಳೇನೆಂದರೆಃ-

ದಿನಾಂಕ 18.06.2021 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಲಿಂಗದಹಳ್ಳಿ ಗ್ರಾಮದ ಪಿಳ್ಳಯ್ಯನ ಕೆರೆಯ ಏರಿಯ ಮೇಲೆ 1 ನೇ ಆರೋಪಿಯಾದ ನೀವು ಹೀರೋ ಹೊಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್ ಸಂಖ್ಯೆ ಕೆಎಃ16/ಕ್ಯೂ-9486 ರಲ್ಲಿ ಯಾವುದೇ ಪರವಾನಗಿ ಇಲ್ಲದೇ ಒಂದು ರಟ್ಟಿನ್ ಬಾಕ್ಸ್ ನಲ್ಲಿ ರೂ.3,372/- ಬೆಲೆ ಬಾಳುವ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 96 ಮದ್ಯ ತುಂಬಿದ ಪ್ಯಾಕೇಟ್ ಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಇಟ್ಟುಕೊಂಡಿದ್ದು, ಆದಕಾರಣ 1 ನೇ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, 1 ನೇ ಆರೋಪಿಯಾದ ನೀವು ಹೀರೋ ಹೊಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್ ಸಂಖ್ಯೆ ಕೆಎಃ16/ಕ್ಯೂ-9486 ರಲ್ಲಿ ಯಾವುದೇ ಪರವಾನಗಿ ಇಲ್ಲದೇ ಒಂದು ರಟ್ಟಿನ್ ಬಾಕ್ಸ್ ನಲ್ಲಿ ರೂ.3,372/- ಬೆಲೆ ಬಾಳುವ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 96 ಮದ್ಯ ತುಂಬಿದ ಪ್ಯಾಕೇಟ್ ಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಇಟ್ಟುಕೊಂಡು

ಸಾಗಾಟ ಮಾಡುತ್ತಿದ್ದು, ಆದಕಾರಣ 1 ನೇ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, 2 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ತರೀಕೆರೆಯ ಸುರಪಾನ ವೈನ್ಸ್ ಶಾಪ್ ಗೆ ಸರಬರಾಜು ಮಾಡಿದ ಮದ್ಯದಲ್ಲಿ ರೂ.3,372/- ಬೆಲೆ ಬಾಳುವ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 96 ಮದ್ಯ ತುಂಬಿದ ಪ್ಯಾಕೇಟ್ ಗಳನ್ನು ಯಾವುದೇ ಪರವಾಗಿ ಇಲ್ಲದ 1 ನೇ ಆರೋಪಿಗೆ ಮಾರಾಟ ಮಾಡಲು ನೀಡಿದ್ದು, ಆದಕಾರಣ 2 ನೇ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 36(ಬಿ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಕೋವಿಡ್-19 ಕಾಯಿಲೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಸರ್ಕಾರವು ನಿಷೇಧಾಜ್ಞೆ ಹೊರಡಿಸಿದ್ದರೂ ಸಹ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ 1 ನೇ ಆರೋಪಿಯಾದ ನೀವು ಹೀರೋ ಹೊಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್ ಸಂಖ್ಯೆ ಕೆಎ:16/ ಕ್ಯೂ-9486 ರಲ್ಲಿ ಯಾವುದೇ ಪರವಾನಗಿ ಇಲ್ಲದೇ ಒಂದು ರಟ್ಟಿನ ಬಾಕ್ಸ್ ನಲ್ಲಿ ರೂ.3,372/- ಬೆಲೆ ಬಾಳುವ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 96 ಮದ್ಯ ತುಂಬಿದ ಪ್ಯಾಕೇಟ್ ಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಇಟ್ಟುಕೊಂಡು ಸಾಗಾಟ ಮಾಡುತ್ತಿದ್ದು ಹಾಗೂ 2 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ತರೀಕೆರೆಯ ಸುರಪಾನ ವೈನ್ಸ್ ಶಾಪ್ ಗೆ ಸರಬರಾಜು ಮಾಡಿದ ಮದ್ಯದಲ್ಲಿ ಸದರಿ ಮದ್ಯವನ್ನು ಯಾವುದೇ ಪರವಾನಗಿ ಇಲ್ಲದ 1 ನೇ ಆರೋಪಿಗೆ ಮಾರಾಟ ಮಾಡಲು ನೀಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 269 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಕೋವಿಡ್-19 ಕಾಯಿಲೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಸರ್ಕಾರವು ನಿಷೇಧಾಜ್ಞೆ ಹೊರಡಿಸಿದ್ದರೂ ಸಹ ಕ್ವಾರಂಟೈನ್ ನಿಯಮವನ್ನು ಉಲ್ಲಂಘನೆ ಮಾಡಿ 1 ನೇ ಆರೋಪಿಯಾದ ನೀವು ಹೀರೋ ಹೊಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್ ಸಂಖ್ಯೆ ಕೆಎ:16/ಕ್ಯೂ-9486 ರಲ್ಲಿ ಯಾವುದೇ ಪರವಾನಗಿ ಇಲ್ಲದೇ ಒಂದು ರಟ್ಟಿನ ಬಾಕ್ಸ್ ನಲ್ಲಿ ರೂ.3,372/- ಬೆಲೆ ಬಾಳುವ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 96 ಮದ್ಯ ತುಂಬಿದ ಪ್ಯಾಕೇಟ್ ಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಇಟ್ಟುಕೊಂಡು ಸಾಗಾಟ ಮಾಡುತ್ತಿದ್ದು ಹಾಗೂ 2 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ತರೀಕೆರೆಯ ಸುರಪಾನ ವೈನ್ಸ್ ಶಾಪ್ ಗೆ ಸರಬರಾಜು ಮಾಡಿದ ಮದ್ಯದಲ್ಲಿ ಸದರಿ ಮದ್ಯವನ್ನು ಯಾವುದೇ ಪರವಾನಗಿ ಇಲ್ಲದ 1 ನೇ ಆರೋಪಿಗೆ ಮಾರಾಟ ಮಾಡಲು ನೀಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 271

ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ 29.09.2025

ಸಹಿ

**(ಉರ್ಮಿಳ.ವಿ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.